# ಅನುತ್ತರಾ

## ಅನುತ್ತರಾ

"ಪತ್ನೀಂ ಮನೋರಮಾಂ ದೇಹಿ
ಮನೋವೃತ್ತಾನುಸಾರಿಣೀಂ
ತಾರಿಣೀಂ ದುರ್ಗಸಂಸಾರ
ಸಾಗರಸ್ಯ ಕುಲೋದ್ಭವಾಂ!"

೧

ಯಾರಿವಳು ಮಲಗಿರುವಳು?
ನನ್ನ ಬಲತೋಳೆ ತಲೆದಿಂಬಾಗಿ
ತನ್ನ ಬಲತೋಳಿನಿಂದೆನ್ನನಪ್ಪಿ
ಯಾರಿವಳು ಮಲಗಿರುವಳು?
ಬೆಳ್ದಿಂಗಳಿನ ಹಣೆಯ ಮೇಲೆ ಕುಂಕುಮದ ಬಿಂದು;
ಮಿರುಗುತಿದೆ ಮೂಗುತಿಯ ಬಜ್ಜರದ ಬಟ್ಟು!
ತನ್ನ ಜೀವವನೆಲ್ಲ ಸೂರೆನೀಡಿ,
ನನ್ನ ಜೀವವನೆಲ್ಲ ಸೂರೆಮಾಡಿ,
ಆನಂದದಲಿ ತೇಲಾಡಿ,
ಬಂಧನದೊಳೋಲಾಡಿ
ಯಾರಿವಳು ಮಲಗಿರುವಳು,
ನನ್ನನಿಂತೊಪ್ಪಿ,
ಬಿಗಿದು ಅಪ್ಪಿ?

"ವಿದ್ಯಾಃ ಸಮಸ್ತಾಃ ತವ ದೇವಿ ಭೇದಾಃ
ಸ್ತ್ರೀಯಃ ಸಮಸ್ತಾಃ ಸಕಲಾ ಜಗತ್ಸು!"

೨

ಭೂಮೆ ತಾನಲ್ಪೆಯಾಗಿ,
ಸರ್ವಜ್ಞೆ ತಾನಜ್ಞೆಯಾಗಿ,
ಪೂರ್ಣಸುಖೆ ತಾಂ ಸುಖದುಃಖೆಯಾಗಿ,

ಅಜ್ಞಾನ ಲೀಲೆಗೊಪ್ಪುತೆ ನನ್ನನುದ್ಧರಿಸಲೆಂದೆನ್ನ
ಅರ್ಧಾಂಗಿಯಾಗಿ,
ಸಂಸಾರಸಾಗರದಿ ಮುಳಗಿ ತೇಲುವ ನನ್ನ
ಬೆನ್ಗೆ ಬೆಂಡಾಗಿ,
ಜನ್ಮಜನ್ಮದಲಿ ಕೃಪೆದೋರಿ ಬೆಂಬಿಡದ
ನಾವೆಯಾಗಿ,
ಯಾರಿವಳು ಮಲಗಿರುವಳು,
ನನ್ನ ಬಲತೋಳು ತಲೆದಿಂಬಾಗಿ
ತನ್ನ ನಳಿತೋಳಿನಿಂದೆನ್ನನಪ್ಪಿ?

೩
ಜಗದ ಜನಗಣಿತಿ ಪಟ್ಟಿಯಲ್ಲಿ
ಇವಳ ಹೆಸರು
ದೇವಂಗಿ ರಾವಣ್ಣಗೌಡರ ಮಗಳು
ಹೇಮಾವತಿ,
ಕುಪ್ಪಳಿಯ ವೆಂಕಟಪ್ಪಗೌಡರ ಮಗನ
ಹೆಂಡತಿ!

೪
ಚೆಲುವು ಮುದ್ದಿನ ಮುದ್ದೆ
ನನ್ನ ತೋಳಿನ ಮೇಲೆ ಮಾಡುತಿರೆ ನಿದ್ದೆ
ಅದ ನೋಡಿ ಸುಖಿಸೆ ನಾನೇನು ಪುಣ್ಯಮಾಡಿದ್ದೆ?
ನಿರಾಕರೆ ಸಾಕಾರೆಯಾಗಿ,
ನಿರ್ಗುಣೆ ಸಗುಣೆಯಾಗಿ,
ಅರೂಪೆ ರೂಪವತಿಯಾಗಿ,
ಚೆಲುವು ಮುದ್ದಿನ ಮುದ್ದೆ,
ನನ್ನ ತೋಳಿನ ಮೇಲೆ ಪವಡಿಸಿರೆ ಕರಿಗುರುಳ
ಚೆಂದುಟಿಯ ನಿದ್ದೆ,
ಅದ ಕಂಡು ಸುಖಿಸೆ ನಾನೇನು ಪುಣ್ಯಮಾಡಿದ್ದೆ?

೫
ಯೋಗವೇದಿಕೆ ಮಂಚ;
ಭೋಗಾಸನವೆ ಯೋಗಾಸನ.
ಚೆಂದುಟಿಯ ಚುಂಬನವೆ ಧ್ಯಾನಮುದ್ರೆ;
ಹೊಂಗಳಸದಾಲಿಂಗನವೆ ಯೋಗನಿದ್ರೆ.
'ಓಂ ..... ನ .... ಯ!'
ಇಷ್ಟಮಂತ್ರದ ಜಪದ
ನಿಧುವನಪ್ರಲಯದಲಿ,
ದಿಗಂಬರಾ ಬುದ್ಧಿಯಲಿ
ನಿರ್ವಾಣ ಸಿದ್ಧಿಯಲಿ
ದ್ವೈತ ತಾನದ್ವೈತಿ ಲಯಸಮಾಧಿಯಲಿ!

"ಪ್ರೇಮೈಕ ಬಿಂದುಂ ಚಿರದಗ್ಧ ಚಿತ್ತೇ
ವಿಷಿಂಚ ಚಿತ್ತಂ ಕುರು ನಃ ಸುಶಾನ್ತಂ!"
ಯಾರಿವಳು ಮಲಗಿರುವಳು,
ನನ್ನನಿಂತಪ್ಪಿ,
ಒಪ್ಪಿ?

೬
ಏರಿ ಕಾಣ್, ಈ
ಉತ್ತರವೆ ಏಣಿ:
"ನನ್ನ ಚಿನ್ನ!
ನನ್ನ ಹೇಮಿ!
ನನ್ನ ಶ್ರೀಮತಿ!
ನನ್ನ ರಾಣಿ!
ನನ್ನ ಮುದ್ದಿನ ಹೆಂಡತಿ!"

"ನನ್ನ ಸೌಭಾಗ್ಯವತಿ!
ನನ್ನ ಪ್ರಾಣೇಶ್ವರಿ!
ನನ್ನ ಯಜಮಾನಿ!

ನನ್ನ ಗುರುಕೃಪೆ!
ನನ್ನ ಮಹಾಮಾತೆಯ ಶ್ರೀಪಾದಪದ್ಮ:"

"ನನ್ನ ದೇವಿ,
ಜಗನ್ಮಾತೆ,
ಆದಿಶಕ್ತಿ,
ಮಹಾಮಾಯೆ,
ಅನುತ್ತರಾ,
ಓಂ! ....."

"ಸರ್ವಮಂಗಲ ಮಾಂಗಲ್ಯೇ
ಶಿವೇ ಸವಾರ್ಥಸಾಧಿಕೇ
ಶರಣ್ಯೇ ತ್ರ್ಯಂಬಕೇ ಗೌರಿ
ನಾರಾಯಣಿ ನಮೋಸ್ತು ತೇ!"

## ಅನಂಗ ರಂಗ

ನಿನಗೆ,
ಅದೊಂದು ಬರಿಯ ಅಂಗದ ಉಪಾಂಗ:
ನನಗೊ?
ಸುಖಸಾಗರ ಭೋರ್ಗರೆಯುವ ತರಂಗ!

ನಿನಗೆ,
ತೊಗಲೆಲ್ಬು ಗೂಡಿನೊಡಲೊಂದು ಜಘನ್ಯಸ್ಥಾನ:
ನನಗೊ?
ಆನಂದದಾಗರ ಹೂ ಹೂ ಹೂಕುಣಿಯುವ ಉದ್ಯಾನ!

ನಿನಗೆ,
ಸಂಸಾರ ಕಂದರಕ್ಕೆಸೆವೊಂದು ಮಾಯಾಭಂಧನ:
ನನಗೊ?
ಸ್ವರ್ಗ ಶಿಖರದೊಳೆಸೆವ ರಸತಪೋನಂದನ!

## ಹಣೆ ಮತ್ತು ಕಣ್ಣು

ನಿನ್ನ ಕಣ್ಣೊಳಗೊಂದು
ಆನಂದದಾ ಸಿಂಧು
ನಾ ಚಿನ್ಮಯ!
ನಿನ್ನ
ಹಣೆಯ ಕುಂಕುಮ ಬಿಂದು
ಇಂಗಡಲ ಹೇಮೇಂದು:
ನನಗೂ
ಪ್ರಾಣಮಧು ಚೈತನ್ಯದಾ
ಚಂದ್ರೋದಯ!

## ಸ್ವರ್ಗದ್ವಾರದಿ ಯಕ್ಷಪ್ರಶ್ನೆ

೧
ಸ್ವಪ್ನದಲಿ ನಾನೊಮ್ಮೆ ಸತ್ತಿದ್ದೆ —
ಥೂ ಹಾಳುಬಾಯಿ! —
ಅಲ್ಲ, ಸತ್ತಿರಲಿಲ್ಲ, ಸ್ವರ್ಗಸ್ಥನಾಗಿದ್ದೆ!
ಆದರೂ ಎಚ್ಚರಿದ್ದೆ!
ಮುಂದೆ, ಮುಂದೆ, ಮುಂದೆ,
ರೆಕ್ಕೆ ಬಂದವನಂತೆ ಹೋಗುತ್ತಿದ್ದೆ:
ಅಂಥ ನಿದ್ದೆ!

೨
ಹಾದಿಯಲಿ ಏನೇನೊ ಬೋರ್ಡ್‌ಗಳ ಕಂಡೆ;
ಏನೇನೊ ಲಿಪಿಗಳು, ಚಿತ್ರ ವಿಚಿತ್ರ.
ಯಾವುದೊಂದನು ನನಗೆ ಓದಲಾಗಲಿಲ್ಲ;
ಯಾವುದೂ ನನಗರ್ಥವಾಗಲಿಲ್ಲ.
ಕಡೆಗೆ, ಅಲ್ಲೊಂದು ಕಡೆ, ಕಂಡೆ ಕನ್ನಡ ಲಿಪಿಯ:
ಕೈಮರದ ಬೋರ್ಡಿನಲಿ ಇತ್ತು — ‘ನರಕಕ್ಕೆ ದಾರಿ!’

ನನ್ನ ಕನ್ನಡ ಮಮತೆ ಬಂತು ಉಕ್ಕಿ,
ಕಡೆಗಾದರೂ
ಅರ್ಥವಾಗುವುದೊಂದು ದಾರಿ ಸಿಕ್ಕಿ.
ಅರ್ಥವಾಗದ ಸಗ್ಗ ಎನಿತಿದ್ದರೇನು?
ಅರ್ಥವಾದರೆ ಸಾಕು, ನರಕವೂ ಜೇನು!
ನುಗ್ಗಿದೆನು ಆ ದಾರಿಯಲಿ ನಾನು.

೩
ಇದ್ದಕಿದ್ದಂತೆ ತಡೆಗಟ್ಟಿತೊಂದು ಕೈ;
ಗರ್ಜಿಸಿತ್ತೊಂದು ದನಿ, ಅಶನಿ:
"ನಿನಗಿಲ್ಲಿ ಹುಗಲಿಲ್ಲ. ಹಿಂತಿರುಗು ನಾಕಕ್ಕೆ."

ನಾನೆಂದೆ:
"ನಾಕವಾದರು ಬಾಯಿಪಾಠದ ಬದುಕು ಸಪ್ಪೆ;
ಅರ್ಥವಾಗುವ ನರಕ ಲೇಸೆಂದು ಬಂದೆ."
ಮರುನುಡಿಯನೀಯದಾ ದಾರಿ ಕಗ್ಗಲ್ಲಾಗಿ ಮುಚ್ಚಿತ್ತು.
ಅನ್ಯಾಯಕವಚತ್ತು
ಹಿಂತಿರುಗಿದೆ. ಬೆಪ್ಪಮರಿ ನಾಕಮಾರ್ಗದಿ ನಡೆದೆ ಮುಂದೆ.
ಕಾಣಿಸಿತು ದೂರದಲಿ ಮುಚ್ಚಿದ ಮಹಾದ್ವಾರ!
ಸ್ವರ್ಗಪ್ರವೇಶದಾವೇಶ ಚಿಂತೆ
ಮೆಯ್ವೆತ್ತಂತೆ
ಬಳಿಸಾರಿ ನಿಂತೆ.

೪
"ಯಾರು?" — ಮೊಳಗಿದುದು ದೌವಾರಿಕನ ವಾಣಿ.
"ನಾನು!" — ಅಷ್ಟು ಕೆಚ್ಚಿತ್ತೆನ್ನ ನನ್ನತನದಲ್ಲಿ!
"ನೀನು ನಿಜವಾಗಿ ಯಾರಾಗಿಹೆಯೊ,
ನೀನು ನಿಜದಲ್ಲಿ ಏನಾಗಿಹೆಯೊ,
ಆ ಹೆಸರ ಹೇಳಿದರೆ ತೆರೆವುದೀ ದ್ವಾರ.
ಇಲ್ಲಿ ನಡೆಯದು ನಿನ್ನ ಭೂಲೋಕದವತಾರ,
ಲೋಕ ಮೆಚ್ಚಿದ ಬರಿಯ ಹುಸಿ ಹೆಸರು:

ಅಂತರಾತ್ಮದ ನಿನ್ನ ನಿಜನಾಮವನು ಉಸಿರು!
"ಪು . . . ಟ್ಟ . . . ಪ್ಪ!"
ಅಕ್ಕರಕ್ಕರವನೊತ್ತಿ ನುಡಿದು
ಹೆಮ್ಮೆಯಲಿ ಹೆಸರೊರೆದು ನಿಮಿರಿ ನಿಂತೆ,
ಇನ್ನೇನು ಸ್ವರ್ಗದ್ವಾರ ಹೆದರಿ ಹಿಂಜರಿವುದೆಂದು.
ದೌವ್ವಾರಿಕನು ನಕ್ಕು "ಏನದು? ಟ ಟ್ಟ ಟ್ಟ!
ನಿಜವನೊರೆಯದೆ ಬಾಗಿಲಿದು ತೆರೆವುದಿಲ್ಲ."
ಮನದೊಳೆಂದುಕೊಂಡೆ:
"ಇವನಿಗೇನಿದು ಸೊಕ್ಕು? ಅಮೃತಪಾನದ ಮಹಿಮೆ!
ನನ್ನಾ ಹೆಸರು ಪ್ರಸಿದ್ಧ. ಸುಪ್ರಸಿದ್ಧ, ಜಗತ್‌ಪ್ರಸಿದ್ಧ!

ಅದನಿವನು ಟ ಟ್ಟ ಟ್ಟ ಎಂದಣಕಿಸುವನಲ್ಲ? —
ಓವೊ, ನಾನೆ ತಪ್ಪಿದೆ.
ಪುಟ್ಟಪ್ಪ ಎಂಬುವರು ಎಷ್ಟೆಷ್ಟೊ ಇರುವರಲ್ತೆ?
ಪ್ರಥಮಾಕ್ಷರವನೂ ಸೇರಿಸಿದರೀ ದ್ವಾರ ತೆರೆಯದೇನೋಳದೆ?
ಎಂದುಕೊಳ್ಳುತೆ ಮತ್ತಮ್ಮೊಮ್ಮೆ ಕೂಗಿದೆನು ನನ್ನ ಹೆಸರ:
"ಕೆ . . . ವಿ . . . ಪು . . . ಟ್ಟ . . . ಪ್ಪ!" —
ಬಾಗಿಲು ತೆರೆಯಲಿಲ್ಲ. ಬಿಮ್ಮನಿತ್ತಾ ದ್ವಾರ ......
ದೌವಾರಿಕನ ಕಣ್ಣಲ್ಲಿ ಮಿಂಚಿತು ತಿರಸ್ಕಾರ!
ಆಂಗ್ಲೇಯ ಅಕ್ಷರದ ಮಿಶ್ರಣವೆ ತಪ್ಪಾಯಿತೆಂದು,
ನನ್ನ ನಿಜಜೀವ ಕಾವ್ಯ, ನಿಜನಾಮ ಕಾವ್ಯನಾಮ ಎಂದು,
ಕೂಗಿದೆನು ಮತ್ತೊಮ್ಮೆ, ತಿದ್ದಿಕೊಳುವಂತೆ ತಪ್ಪ!
"ಕು ವೆಂ ಪು!"

ೞ

ಏನಿಂಪು! ಎನಿತು ಪೆಂಪು! ಕನ್ನಡದ ಕಂಪು!
ಕುವೆಂಪು! . . . . .
ಮಾನಪತ್ರಗಳ ರಾಶಿಯೊಳೆ ಬೆಳೆದ ನಾಮ!
ಪುಷ್ಪಹಾರಗಳ ಗೋಪುರವ ತಳೆದ ನಾಮ!
ಸ್ವರ್ಗದ್ವಾರ ಕವಾಟ ಪಾಟನಕರಿ ಅದಾಗದೇನು?

ಕೂಗಿದೆನು ನಾನು:
**“ಕುವೆಂಪು!”** —

ನಕ್ಕನಾ ದೌವಾರಿಕಂ ನಾಮದಾ ವಿಕೃತನೂತ್ನತೆಗೆ,
ಗಹಗಹಿಸಿ, ತಡೆಯಲಾರನೆಂಬಂತೆ:
ಸ್ವರ್ಗದ್ವಾರವೊ? . . . . .
ಹುಬ್ಬುಗಂಟಿಕ್ಕಿ ಬಿಮ್ಮಗಿತ್ತು!

೬
ಗಾಯಗೊಂಡಭಿಮಾನ ಕೆರಳಿದಂತಾಯ್ತು.
ಇದಕ್ಕಿಂತ ನಿಜನಾಮ ಎಲ್ಲಿಂದ ತರಲಿ?
ಹುಚ್ಚು ಹುಚ್ಚಾದೆ.

ಸ್ವರ್ಗದಾ ಹೆಬ್ಬಾಗಿಲಿನ ಕಿವುಡುಗಿವಿಗೆ
ಏನೇನೊ ಹೆಸರುಗಳನೊರಲುತ್ತ ನಿಂತೆ,
ಉನ್ಮತ್ತನಂತೆ.
‘ಲೆಕ್ಚರ್’ ಎಂದೆ;
‘ಅಸಿಸ್ಟೆಂಟ್ ಪ್ರೊಫೆಸರ್!’ ಎಂದೆ;
‘ಪ್ರೊಫೆಸರ್!’ ಎಂದೆ; — ಕಡೆಗೆ,
‘ವೈಸ್ ಛಾನ್ಸಲರ್!’ ಎಂದೆ!
‘ಪದ್ಮಭೂಷಣ!’ ಎಂದೆ. ಕೊಟ್ಟ ಕೊನೆಗೆ
‘ರಾಷ್ಟ್ರಕವಿ!’ ಎಂದೂ ಅಂದೆ!

೭
ಒಂದಕೂ ಜಗ್ಗಲೊಲ್ಲದೆ ಹೋಯ್ತು
ಸಗ್ಗದಾ ಹೆಬ್ಬಾಗಿಲು.
ಕಡೆಗೆ, ನಾ ತಿಳಿದ ಮಟ್ಟಿಗೆ, ನಾನ್ ಗೆಯ್ದ
ಪುಣ್ಯ ಪಾಪದ ಹೊರೆಯ ಪಟ್ಟಿಯನೂ ಒದರಿದೆ!
ನನ್ನ ದುಃಸ್ಥಿತಿಗಿನಿತು ಮನಗರಗಿ ದೌವಾರಿಕಂ:
“ನರಲೋಕ ಮನ್ನಣೆಯ ಆ ಹೆಸರುಗಳಿಗಿಲ್ಲಿ
ಬೆಲೆಯಿಲ್ಲ.

ಅಲ್ಲಿಯ ಮೊದಲಿಗಿಲ್ಲಿ ತುದಿ;
ಅಲ್ಲಿಯ ತುದಿಗೆ ಇಲ್ಲಿ ಮೊದಲು;
ಎಲ್ಲ ತಲೆಕೆಳಗು.
ಆವುದಿದೆ ನಿನ್ನೊಳಗು,
ನಿನ್ನೊಳಿಗನಾ ಬೆಳಗು, —
ನಿನ್ನ ಹಮ್ಮಿನದಲ್ಲ;
ನಿನ್ನ ಬಿಮ್ಮಿನದಲ್ಲ;
ಲೋಕಕೀರ್ತಿಯದಲ್ಲ;
ಮರ್ತ್ಯಗೌರವದ್ದಲ್ಲ;
ಮತಗಿತದ ಧರ್ಮಗಿರ್ಮದ ಆತ್ಮವಂಚಕದ್ದಲ್ಲ; —
ನಿನ್ನ ಹೃದಯದ ಹೃದಯದಾತ್ಮದೊಲವಿನ ಹೆಸರನುಸಿರು.''

೮

ಇದ್ದಕಿಂದ್ದಂತೆ
ಒಳಗೇನೊ ಒಂದು ತಿಳಿವಿನ ಬೆಳಕು ಮಿಂಚಿದಂತಾಯ್ತು.
ಜಗದ ಕಣ್ಣೆಂದಿಗೂ ಇಣುಕದಿರುವೊಂದು
ಗೂಢನಾಮವು ನಾಲಗೆಯ ತುದಿಗೆ ನೆಗೆದು ಬಂತು.
ನಾಚಿ ನಿಂತುದನರಿತು ಇಂತೆಂದನಾ ದೇವದೂತ:
''ಬಾಗಿಲದೊ ಮಿನುಗುತಿದೆ!
ಅದರ ಆನಂದವಾ ಕಾಂತಿ!
ಮುಗಿಯಲಿಲ್ಲಿಗೆ — ಸಾಕು ಬಿಡು,
ಹುಸಿ ಹೆಸರುಗಳ ಆ ಭ್ರಾಂತಿ:
ನಾಚಿಗೆಯನಾಚೆಗಿಡು;
ನಿಜದ ನಿಜನಾಮವನು ಹೆದೆಗೆ ತೊಡು;
ಎದೆ ತೆರೆಯುವುದು ನಿನಗೆ ಶಾಂತಿ!''

ಕೈ ಮುಗಿದು,
ನಿಜಕಾಗಿ ನಾಚಿಕೆಯನಾಚೆ ತಳ್ಳಿ,
ನಾನೆಂದೆ ತೊದಲಿ ತೊದಲಿ:
''ನನ್ನನುದ್ಧರಿಸೆ
ಶ್ರೀ ಗುರುಕೃಪೆಯೆ ಮೆಯ್ವೆತ್ತು ಬಂದಿರುವ

ಶ್ರೀ ಮಹಾಮಾತೆಯಡಿದಾವರೆಯೆ ಆಗಿರುವ
ಸತಿಯ ಒಲವಿನ ಸೆರೆಯೆ ನಾನು . . . .
ನಾ . . . . ನು, ನಾ . . . . ನು, ನಾ . . . . ನು
ಹೇ . . . ಮೀ . . . ಗಂ . . . ಡ!" —
ಪದ್ಮದಲವೆನೆ ಬಿರಿದು ತೆರೆದ ಸಗ್ಗವಾಗಿಲ ಕಂಡು ಆತ
ಬಂಡುಂಡ ದುಂಬಿಯಂದದಿ ಸೊಗಸಿದನು ದೇವದೂತ! . . .

ಕಂಡೆ! . . .
ಒಳನುಗ್ಗಿದೆ! . . . .

ಸಜ್ಜೆಮಂಚದ ಮೇಲೆ ಚಾಚಿದೆನ್ನಯ ತೋಳ
ತಲೆದಿಂಬಿನಲಿ, ಬಾಳಸಗ್ಗದ ಮೊಗವ ಕಂಡೆ! —
ಎ, ಚ್ಚ, ತ್ತಿ, ದ್ದೆ!

## ಸೌಭಾಗ್ಯವತಿಗೆ

ನನ್ನ ಸಾಧನ ರಂಗ
ನಿನ್ನ ಅಂಗಾಂಗ:
ನನ್ನ ಕಾಪಿಡಲೆಂದೆ
ನೀನು ಬಂದೆ!
ನನ್ನ ಸೌಭಾಗ್ಯವತಿ
ಗುರುಕೃಪಾ ರೂಪಸತಿ
ನೀಂ ಪ್ರೇಮಸದ್ಮ;
ಶ್ರೀ ಮಹಾಮಾತೆಯಾ
ಶ್ರೀಪಾದಪದ್ಮ!

## ಸುಖ ಸಮರ್ಪಣೆ

ನಮ್ಮ ಈ ಸುಖವೆಲ್ಲ ಹೂವಾಗಿ ಮೇಲೇರಿ
ನಿನ್ನಡಿಯೆ ಗುಡಿಯಾಗೆ ಪುಷ್ಪರಾಶಿ
ಭಕ್ತಿಯೀ ಆನಂದಬಾಷ್ಪಭಾಗೀರಥಿಯ
ಮಿಂದು ಹರಸಲಿ ನಿನ್ನ ಚರಣಕಾಶಿ!

ಚೆಲುವನವಲೋಕಿಸುವ ರಸಸುಖವೆ ತಾನೊಂದು
ಮಲ್ಲಿಗೆಯ ಹಿಂಡು ಬೆಳ್ಳಕ್ಕಿಗೊಂಡಂತೆ
ಸಾಲಾಗಿ ಹಾಲಾಗಿ ಪಂಕ್ತಿ ಪಂಕ್ತಿಯೆ ಹಾರಿ
ಏರಿ ಎರಗಲಿ ಪದಕೆ ಸೊದೆವೊನಲಿನಂತೆ!

ಸರ್ವಾನುರಾಗದಾ ಚುಂಬನಾಲಿಂಗನದ
ಭೋಗಯೋಗಾಸನದ ಔತಣಾಗ್ನಿ
ಮಂತ್ರ ಪಂಚಾಕ್ಷರ ಜಪಜ್ವಲದ ಘೃತವೇರೆ
ಯಜ್ಞದೀಕ್ಷಿತ ಪ್ರಣಯ ರಾಜರಾಜ್ಞಿ
ನಕ್ಷತ್ರ ರಾತ್ರಿಯಲಿ ಕೈಲಾಸ ಯಾತ್ರಿ!

## ವರ್ಧನ್ತಿ (೨೯-೧೨-೧೯೫೭)

೧
ಇಂದಿಗೈವತ್ತುಮೂರು ವರುಷಗಳಾಚೆ ಅಲ್ಲಿ,
ಹಿರಿಕೊಡಿಗೆಯಲ್ಲಿ,
ಸಹ್ಯಾದ್ರಿಯ ಕಾನ್ಮಲೆಗಳ ಮಡಿಲೊಳಗಿದ್ದ
ಆ ಕುಗ್ರಾಮದಲ್ಲಿ,
ಒಂದೆಮನೆ ಹಳ್ಳಿಯಲ್ಲಿ:
ನೆತ್ತಿಮೇಲೆ ಶಿಖರಪಂಕ್ತಿ ಪರಿಧಿಯಾದ ನೀಲಶರಧಿ —
ಬಾನು;
ಸುತ್ತಮುತ್ತ ಕಾಫಿಕಾನು;

ಮತ್ತೆ, ಬತ್ತದ ಗದ್ದೆ, ಅಡಕೆ ಬಾಳೆಯ ತೋಟ:
ಗುಡ್ಡ ಬೆಟ್ಟ ಕಾಡು ತೆರೆಬಿದ್ದು ಎದ್ದ ಚೆಲ್ವುನೋಟ:
ನಾಗರಿಕತೆಗತಿದೂರದ ಅಜ್ಞಾತದ
ಆ ಹಿರಿಕೊಡಿಗೆಯಲ್ಲಿ
ನನ್ನಮ್ಮ, ದೇವಿ ಸೀತಮ್ಮ, ಚೊಚ್ಚಲೆನ್ನಂ ಪಡೆವ
ತಪದೊಳಿರೆ:

೧

ಓ ಆ ದೂರದ, ಬಹುದೂರದ, ಬಂಗಾಲದ,
ಕಲ್ಕತ್ತದ ದಕ್ಷಿಣೇಶ್ವರದಿಂದ ಹುಟ್ಟಿ,
ಬಾನ್ಗೇರಿ ಬಾಗಿ,
ಯೋಜನಂಗಳ ಮೀಟಿ, ದಾಟಿ,
ಕುಪ್ಪಳಿಯಾಚೆಯ ಕೊಪ್ಪದೆಡೆಯ ಹಿರಿಕೊಡಿಗೆಯ ಮುಟ್ಟಿ
ನಿಂದುದೊಂದು ಮಹಾ ಮಳೆಬಿಲ್ಲು, ಕಮಾನು ಕಟ್ಟಿ,
ಶ್ರೀಗುರುವಿನ ಕೃಪೆಯ ಬರವಿಗೊಂದು ದೇವಸೇತುವಾಗಿ,
ಅಲ್ಲಿಂದಿಲ್ಲಿಗೆ ಬೀಸಿದೊಂದೆ ರುಂದ್ರ ಕಮಾನು ಬಾಗಿ!

೨

ಅಮ್ಮ ನೋವಿನ ಸಮಾಧಿಯೊಳಿರೆ
ಕೇಳಿಸಿತ್ತೊಂದು ಇಂಪಿನ ಕರೆ,
ಆಕಾಶದಿಂದಿಳಿದಾ ಗಂಗೆಯ ಮೊರೆ:

"ಆರಮ್ಮಾ ನೀನು?"

"ಶ್ರೀಗುರುಕೃಪೆ ನಾನು!"

"ಎಲ್ಲಿಂದ ಬಂದೆ?"

"ದಕ್ಷಿಣೇಶ್ವರದಿಂದಲೈತಂದೆ. . . . . .
ನೀನಾರಮ್ಮ, ಇಲ್ಲಿ ಸಂಭ್ರಮಿಸುತಿರ್ಪೆಯಲ್ಲಾ?"

“ಅಕ್ಕ, ನಾನ್ ಸಹ್ಯಾದ್ರಿಯ ಅಧಿದೇವಿ.
ನನ್ನ ಗರ್ಭದೊಳೊಂದು
ದಿವ್ಯಕೃತಿ ಆವಿರ್ಭವಿಪುದೆಂದು
ಆಕಾಶದಾದೇಶವನು ಆಲಿಸಿದೆನಿಂದು.
ಅದಕಾಗಿ ಅರಸಿ ಬಂದು
ನೋಡುತಿಹೆನಿಲ್ಲಿ ನಿಂದು.”

“ಇಲ್ಲಿಲ್ಲಿಯೊ ಹುಟ್ಟಿಹನಂತಮ್ಮಾ ಅವನು.
ಕಳುಹಿದಳೆನ್ನನು ಭವತಾರಿಣಿ ಜಗದಂಬೆ.
ಆಶೀರ್ವಾದವ ತಂದಿಹೆನು.
ತೋರುವೆಯೇನ್, ಅಮ್ಮಾ?”

“ತೋರುವೆ, ಬಾರಮ್ಮಾ . . . . .
ಅವನಾರೌ, ತಾಯೀ?”

“ಶ್ರೀಗುರು ಕೃಪೆಮಾಡಿಹ ವಾಗ್ದೇವಿಯ ಹೃದಯ ಶಿಶು;
ಯುಗಯುಗವೂ ದೇಶದೇಶದಲಿ ಸಂಭವಿಸುವ
ಆವೇಶದ ಯಜ್ಞಪಶು:
ಇವನ ಗುರುವಹನಿಹನು ಕಾಶಿಯಲಿ,
ಭೀಷಣ ತಪೋಮಗ್ನ.
ಗುರುವಿನೆಡೆಗೊಯ್ವಾತನಿಹನು
ಮಲೆಯಾಳದಾ ಕೊಚ್ಚಿಯಲಿ,
ಅರಮನೆಯೊಳೂ ಅಣುಗ ಚಿಂತಾನಿಮಗ್ನ.
ಇವನ ಕೈಹಿಡಿದು ನಡಸೆ,
ಆಲಿಸಮ್ಮಾ,
ನನಗಿಹುದು ಇವನೊಡನೆ ಸಹಧರ್ಮಿಣಿಯ
ಯೋಗಲಗ್ನ!”

“ಎಲ್ಲಿಂದೆಲ್ಲಿಗೆ, ತಾಯಿ?
ಜನವಿಲ್ಲದ ಈ ಕಾಡಿನ ಕೊಂಪೆಯೊಳೇಕೊ
ಆ ಕವಿಯವತಾರ?”

“ಓಃ! ಆ ಚೇತನಕೀ ಸಹ್ಯಾದ್ರಿಯ ಲಿಂಗಶರೀರ!
ಮಂದವನಿಂದಾಗುವ ಕಜ್ಜಕೆ ಇಂದೀ
ಕಾಡೇ
ಹಾಡುತ್ತಿದೆ ನಾಂದಿ!
ಶಕ್ತಿಯ ವಿಕಸನಕಾವಶ್ಯಕವೀ ಸಂಸ್ಕಾರ:
ಹುಲಿಯಾರ್ಭಟೆ, ಹಕ್ಕಿಯ ಇಂಚರ, ಮೋಡದ ಸಂಚಾರ,
ದುಮುದುಮುಕುವ ಹೊಳೆನಿರಾಟ.
ಹಸುರಿನ ಹೂವಿನ ಹಣ್ಣಿನ ರಸದೂಟ! . . . .
ನೀನ್ ಅವನೊಡನಾಡಿ;
ನೀ ದಾದಿ;
ಅವನರಳುವ ಸಿರಿನೋಟವೆ ನಿನಗೊದಗುವ ಔತಣವಾಗಿರೆ,
ಅದನಿಂದೇ ಅರಿಯುವ ಅವಸರವೇಕಮ್ಮಾ? —
ಈ ಸಹ್ಯಾದ್ರಿಯ ಘೋರಾರಣ್ಯದ ಮರೆಯ
ಬಾಹುರಕ್ಷೆಯಲಿ
ತನ್ನಾ ಮಾತೃವಕ್ಷದೊಳಿರ್ಪಾತನನು ನನಗೆ ತೋರಮ್ಮಾ,
ಬೇಗ ತೋರಮ್ಮಾ!”

“ತೋರುವೆ, ಬಾರಮ್ಮಾ . . . .
ನಾ ಧನ್ಯೆ! . . . . ಬಾರಮ್ಮಾ! . . . .
ಅದೊ ಓ ಕಾಣಮ್ಮಾ!”

## ರಸಋಷಿ ಪರಿರಂಭಿಸಿ!

ಓ ನನ್ನ ಮಹಾಮಾತಾ
ಶ್ರೀ ಪಾದಪದ್ಮವೆ,
ಸತೀ ಶರೀರ ರೂಪಿ ಓ
ಪ್ರೇಮ ಹೇಮ ಸದ್ಮವೆ,
ನಿನ್ನನೊಲಿದು ನಾ ವಿರಾಗಿ;
ಅಪ್ಪಿದರೂ ಮಹಾತ್ಯಾಗಿ;
ಪರಮಯೋಗಿ ಚುಂಬಿಸಿ!

ಆಲಿಂಗಿಸಿ ನಾ ಮಹರ್ಷಿ;
ಭೋಗಿಸಿಯೂ ನಾ ತಪಸ್ವಿ;
ರಸಋಷಿ ಪರಿರಂಭಿಸಿ!

## ಯಾರು ಪುರಸ್ಕರಿಸಲೇನು?

ಯಾರು ಪುರಸ್ಕರಿಸಲೇನು?
ಯಾರು ತಿರಸ್ಕರಿಸಲೇನು?
ಹೊಗಳಲೇನು? ತೆಗಳಲೇನು?
ಲೋಕ ತೊರೆದು ಬಿಟ್ಟರೇನು?
ಕೊಟ್ಟಕೊನೆಗೆ
ಬರಲು ಮನೆಗೆ
ನಿನಗೆ ನಾನು, ನನಗೆ ನೀನು!
ಎರಡು ಸೊನ್ನೆ
ಸೇರಿ, ಚೆನ್ನ,
ಪೂರ್ಣವಲ್ತೆ 'ಒಂದು' ತಾನು!

## ಯಾರಿದು?

ಹಣೆಯಲಿ ಕುಂಕುಮ, ಮೂಗಲಿ ಮೂಗುತಿ,
ಕೊರಳಲಿ ಮಾಂಗಲ್ಯ:
ಪಕ್ಕದೆ ಮಲಗಿದೆ ತ್ರಿಜಗನ್ಮಾತೆಯ
ವಕ್ಷದ ವಾತ್ಸಲ್ಯ!
ಪ್ರೇಯಸಿ? ಸಹಧರ್ಮಿಣಿ? ಹೆಂಡತಿ? ತಾಯಿ?
ಲೌಕಿಕ ಸಂಬಂಧಕೆ ತೊದಲಿತೊ ಬಾಯಿ!

## ಮೆಯ್ಯ ಮೈದಾನದಲಿ

ನಿನ್ನ
ಮೆಯ್ಯ ಮೈದಾನದಲಿ ನಾನು ಕ್ರೀಡಾಪಟು;
ನಿನ್ನ
ವಕ್ಷಶೃಂಗಾಶ್ರಮದಿ ನಾ ತಪಂಗೈವ ವಟು;
ನಿನ್ನ
ಒಂದೊಂದು ಅಂಗವೂ ನನ್ನ ಆನಂದಕುಟಿ;
ಅಲ್ಲಿ
ಹಾಲುಜೇನನೆ ಹೀರಿ ಮೈಮರೆವುದೆನ್ನ ತುಟಿ!

ಎಲ್ಲಿ ಆಸ್ವಾದಿಸಿದರಲ್ಲಿ ಸಕ್ಕರೆ;
ಎಲ್ಲಿ ಆಘ್ರಾಣಿಸಿದರಲ್ಲಿ ಮಲ್ಲಿಗೆ;
ಸರೋಜಕ್ಕೆ ಸೆಣಸುತಿರೆ ಚಕ್ರವಾಕ
ಪುಂಡರೀಕವನೇರೆ ಚಂಚರೀಕ,
ನೀ
ರಕ್ತಕೋಕನದ ಮಕರಂದ ಕೋಶ!
ನಾ
ಪ್ರೇಮದ್ವಿರೇಫ ಹೇಮೋಜ್ವಲಾವೇಶ!

## ಮಂಚಯೋಗಿ

ಗಲ್ಲ, ಕೆನ್ನೆ, ಮೂಗು, ಹುಬ್ಬು,
ಕಣ್ಣು, ತುಟಿ, ಹಣೆ, ಜಡೆ,
ವ . . . ಕ್ಷೋ . . . ಜ
ಕುಟ್ಮಲ ಸರೋಜ
ನಿತಂಬಾದಿ ಅಂಗಾಗ
ನನಗಿಂದಾಗಿವೆ ತಪೋರಂಗ:
ಶ್ರೀಮಾತೆಯ ಚರಣಕೃಪಾ ಸರೋಜಸಂಗ!

## ಪ್ರೇಮ ಗಣಿತ

ನೀ ಆರು ಕಾಸು, ನಾ ಮೂರು ಕಾಸು:
ಕೂಡಿದರೆ ನಮ್ಮ, — ರೂಪಾಯಿ ಕೋಟಿ!

ನೀ ತರುವೆ ಸ್ವಲ್ಪ, ನಾ ತರುವುದಲ್ಪ:
ಸೇರಿದರೆ ನಾವು, — ನಾಚುವುದು ಕಲ್ಪ!

ನಿಂದೊಂದು ಮುತ್ತು, ನಂದೊಂದು ಮುತ್ತು;
ಅಪ್ಪಿದರೆ, ಮೊತ್ತ? — ವಿತ್ತೇಶನೆತ್ತು!

ನಾನೊಂದು ಬೇಸರ, ನೀನೊಂದು ಆಸರ:
ಸಂಗಮಿಸೆ ನಾವು, — ಆನಂದ ಕಾಸಾರ!

ನಾನೊಂದು ಕ್ಷುದ್ರ, ನೀನೋ ದರಿದ್ರ:
ಒಟ್ಟಾದರಾಹಾ, — ಸಂಪತ್ಸಮುದ್ರ!

ನೀನೊಂದು ಪೂಜ್ಯ, ನಾನೊಂದು ತ್ಯಾಜ್ಯ:
ಒಂದಾಗಲೆರಡೂ, — ಪೂರ್ಣತಾ ರಾಜ್ಯ!

## ನಿತ್ಯದಲ್ಲಿ ಭಗವತಿ!

ಲೋಕರಂಗಲ್ಲಿ ಸತಿ;
ನಿತ್ಯದಲ್ಲಿ ಭಗವತಿ!
ಇಲ್ಲಿ ನಿನಗೆ ತೊಟ್ಟಿಲಲ್ಲೆ
ನಾನೆ ಇಟ್ಟ,

ನಾನೆ ಕೊಟ್ಟ
ಹೆಸರು: (ಹೇಳಿಬಿಡಲೆ, ನಲ್ಲೆ?)
ಹೇ . ಮಾ . ವ . ತಿ!

## ದಿವ್ಯೌಷಧ

ಈ ಜಗದ ಜಂಜಡಕೆ, ಈ ಜನದ ಕೋಟಲೆಗೆ,
ನಿನ್ನ ಅವಲೋಕನವೆ ಸಿದ್ಧೌಷಧ;
ವಂದಿಸುವ ಈರ್ಷ್ಯೆಗೂ ಮತ್ಸರಿಪ ನಿಂದೆಗೂ
ನಿನ್ನ ಆಲಿಂಗನವೆ ಪರಮೌಷಧ;
ಇಂದ್ರಿಯದ, ಮನದ, ಬುದ್ಧಿಯ ತೊಂದರೆಯ ತೊಲಗೆ
ನಿನ್ನೊಳೊಂದಾಗುವುದೆ ದಿವ್ಯೌಷಧ!

## ಜನ್ಮಜನ್ಮ ಸಂಗಾತಿ

ಯಾರು ಕೈ ಬಿಟ್ಟರೂ ನೀ ಬಿಡದಿರು;
ನೀನೆನ್ನ ತಾಯ್, ತಂದೆ, ಗುರು, ದೇವರು!

ನಿನ್ನೊಡನೆ ಹಿಂದೆನಿತೊ ಸಾರಿ ಹುಟ್ಟಿದೆ ಸತ್ತೆ;
ಮುಂದೆಯೂ ನಿನ್ನೊಡದೆ ಜನ್ಮಜನ್ಮವನೆತ್ತೆ
ಹಿಂಜರಿಯೆನೈ, ಕ್ಲೇಶಕಷ್ಟದಿ, ಮತ್ತೆ ಮತ್ತೆ,
ಸಂಸಾರ ಲೀಲೆಯ ರಾಸವರ್ತುಲದಿ ಸುತ್ತೆ!

ನೀನಿರಲು ನನ್ನೊಡನೆ, ದುಮುಕೆ ಹೆದರಿಕೆ ಏಕೆ
ಸರ್ಪ ಕಾಳೀಯನಿರ್ಪ ಮಡುವಾದರೂ?
ನೀಂ ಬರಲು ಬೆಂಬಿಡದೆ, ನನಗನ್ಯರೇಂ ಬೇಕೆ?
ನೀಂ ಬಂದೆ ಬಹೆ, ಕೊಂಚ ತಡವಾದರೂ!

## ಚೂ ಕಠಾರಿ

ನನ್ನ ಪಾರ್ಥನೆ ಸದಾ
ನಿನ್ನ ರಕ್ಷೆಯಾಗಿರಲಿ;
ನಿನ್ನನಗಲುವುದೆನ್ನ ಪಾಪಕ್ಕೆ
ಶಿಕ್ಷೆಯಾಗಿರಲಿ.

ನಿನ್ನ ಕ್ಷೇಮದ ಚಿಂತೆ
ನಾ ಪ್ರಾರ್ಥಿಸುತ್ತಿರುವಂತೆ
ಸದಾ ಚುಚ್ಚುಮುಳ್ಳಾಗಿರಲಿ.

ಶಂಕೆ ಭಯ ಉದ್ವೇಗ
ಭಾವಮಯ ಕಲ್ಪನೆಯ
ರೆಂಕೆಯೇರಿ
ನನ್ನ ಪ್ರಾರ್ಥನೆಯ ಭೃಂಗಮುಖ
ಚಂಚೂ ಕಠಾರಿ
ಹೊಕ್ಕು ಭಗವತ್ ಪಾದಪದ್ಮದ
ಮಧುವ ಹೀರಿ
ಸ್ತನ್ಯವಾಗಲಿ ನಿನ್ನ ಜೊನ್ನೆದೆಯ
ಜೇನ್ಗೂಡ ಸೇರಿ!

## ಕೋಟೆ

ಸಂಸಾರದ ರಣರಂಗದಿ
ಇವಳೆ ನನ್ನ ಕೋಟೆ:
ಕೌಟುಂಬಿಕ ಬೇಹಾರದಿ
ಇವಳು ನನ್ನ ಪೇಟೆ:
ಮನ್ಮಥವನ ರತಿಹರಣಿ —
ಬೇಟಕಿವಳೆ ಬೇಟೆ!

## ಕೃಪೆಯ ಸಾಕ್ಷಾತ್ಕಾರ

ಜಗವನಾಳುವ ತಾಯೆ ನನ್ನನಾಳುವ ಮಾಯೆ
ತಾನಾಗಿ ಬಂದಿಹಳು ನನ್ನ ಜಾಯೆ!
ಭೂಮೆ ತಾನಾಗಿಯೂ ಅಲ್ಪೆ ತಾನೆನುವೋಲು
ಒಲಿದಪ್ಪಿ ಮಲಗಿಹಳು ಈ ಕೃಪಾಲು!

ಸೂರ್ಯ ನಕ್ಷತ್ರಾದಿ ಭೂವ್ಯೋಮ ಸಾಗರವ
ಮಾಡಿ ಆಡಿಪ ದಿವ್ಯೆ ಆ ಸರ್ವಶಕ್ತೆ
ಇಲ್ಲಿ ಅಬಲೆಯೆ ಆಗಿ, ಒಲಿದ ಹೆಂಡತಿಯಾಗಿ,
ಮಕ್ಕಳೊಂದಿಗೆ ಚಿಕ್ಕ ಸಂಸಾರಾನುರಕ್ತೆ!

ಸರ್ವಾಂತಾತ್ಮೆ ಆ ಮುಕ್ತೆ, ಭಕ್ತಿಗೆ ಸಿಲುಕಿ,
ತೋಳ್ಸೆರೆಗೆ ಇಳಿದಿಹಳು ತನ್ನ ತಾಂ ತೆತ್ತು;
ಅಲ್ಲಿ ಸಿರಿಯಡಿಗೆರಗಿ ಪೂಜಿಸುವ ನನಗಿಲ್ಲಿ
ಚೆಂದುಟಿಯ ಜೇನೀಂಟುವವಕಾಶವಿತ್ತು!

ಅದು ಪೂರ್ಣ; ಇದು ಪೂರ್ಣ; ಪೂರ್ಣದಂಶವು ಪೂರ್ಣ;
ಪೂರ್ಣವೆರಡರ ನಡುವೆ ನಾನೂ ಸುಪೂರ್ಣ ಪೂರ್ಣ!

## ಕುಂಕುಮ ರಕ್ಷೆ

ನಿನ್ನ
ಹಣೆಯ ಕುಂಕುಮ ರಕ್ಷೆ
ನನಗಿರಲು, ನಲ್ಲೆ,
ಏನಪಾಯದ ಭೀತಿ
ನಮಗಿಲ್ಲ ಬಲ್ಲೆ!

ಬಂಧಿಸಿರೆ ನನ್ನನೀ
ನಿನ್ನ ಚಿನ್ನದ ಕೊರಳ
ಮಾಂಗಲ್ಯ ದೀಕ್ಷೆ
ನಮಗಿರದೆ ಸರ್ವದಾ
ಶಿವೆಯ ಶಿವರಕ್ಷೆ?

# ಎದೆಯ ಹೊಂಗಿಂಡಿ

ಏನು ಆನಂದವನು ತುಂಬಿಟ್ಟುಕೊಂಡಿರುವೆ
ನಿನ್ನೆದೆಯ ಹೊಂಬೆಳ್ಳಿಗಿಂಡಿಯಲ್ಲಿ?
ಕೈಲಾಸ ವೈಕುಂಠಗಳೆ ಕರಗಿ ಹರಿದುವೈ
ಕ್ಷೀರಾಬ್ಧಿಯಂತೆ ಮೈಕಂಡಿಕಂಡಿಯಲ್ಲಿ,
ನನ್ನ ಕೈ ಸೋಂಕಿದಲ್ಲಿ!

ಶ್ವೇತ-ಶಶ ಶರೀರ ಸದೃಶ
ನಿನ್ನ ವಕ್ಷದಮೃತ ಕಲಶ!
ಅಧರಕದರ ಮೃದಲ ಸ್ಪರ್ಶ
ದಿವ್ಯ ಕೃಪಾ ಮಧುರಹರ್ಷ!
ನಿಮಿಷವೊಂದೆ ಆಯ್ತು ವರ್ಷ!
ಒಂದೆ ನಿಮಿಷವಾಯ್ತೆ ವರ್ಷ?


# ಎದೆಯ ಹೊಂಗಿಂಡಿ

ಏನು ಆನಂದವನು ತುಂಬಿಟ್ಟುಕೊಂಡಿರುವೆ
ನಿನ್ನೆದೆಯ ಹೊಂಬೆಳ್ಳಿಗಿಂಡಿಯಲ್ಲಿ?
ಕೈಲಾಸ ವೈಕುಂಠಗಳೆ ಕರಗಿ ಹರಿದುವೈ
ಕ್ಷೀರಾಬ್ಧಿಯಂತೆ ಮೈಕಂಡಿಕಂಡಿಯಲ್ಲಿ,
ನನ್ನ ಕೈ ಸೋಂಕಿದಲ್ಲಿ!

ಶ್ವೇತ-ಶಶ ಶರೀರ ಸದೃಶ
ನಿನ್ನ ವಕ್ಷದಮೃತ ಕಲಶ!
ಅಧರಕದರ ಮೃದಲ ಸ್ಪರ್ಶ
ದಿವ್ಯ ಕೃಪಾ ಮಧುರಹರ್ಷ!
ನಿಮಿಷವೊಂದೆ ಆಯ್ತು ವರ್ಷ!
ಒಂದೆ ನಿಮಿಷವಾಯ್ತೆ ವರ್ಷ?